

# ಭಾರೀ ಗಾತ್ರದ ಬೆಕ್ಕು





ಈ ಚಿತ್ರದಲ್ಲಿರುವ ಬೆಕ್ಕನ್ನೊಮ್ಮೆ ನೋಡಿ. ಭಾರಿ ಗಾತ್ರದ ಈ ಬೆಕ್ಕಿರುವುದು ಅಮೆರಿಕಾ ದೇಶದ ನ್ಯೂಯಾರ್ಕ್ ಪಟ್ಟಣದಲ್ಲಿರುವ ಹೆವನ್ ಎಂಬ ಪ್ರಾಣಿ ಪರ ಸಂಸ್ಥೆಯಲ್ಲಿ. ಇದರ ತೂಕ ಬರೋಬ್ಬರಿ 33 ಪೌಂಡ್!

'ಸ್ಪಾಂಜ್ ಬಾಬ್' ಎಂಬ ಹೆಸರಿನ ಈ ಬೆಕ್ಕಿಗೀಗ 9 ತಿಂಗಳು. ತಿಂಡಿಪೋತ ಈ ಬೆಕ್ಕು, ಸಿಕ್ಕಿದನ್ನೆಲ್ಲ ಭರ್ಜರಿಯಾಗಿ ತಿಂದು ತನ್ನ ತೂಕವನ್ನು ವಿಪರೀತ ಏರಿಸಿಕೊಂಡಿದೆ. ಹಿಂದೆ ಮೆಕ್ಸಿಕೋ ನಗರದಲ್ಲಿ ಮಿಯೋ ಹೆಸರಿನ 39 ಪೌಂಡ್ ತೂಕದ ಬೆಕ್ಕಿತ್ತಾದರೂ ಅದು ಈಗ ಜೀವಂತವಾಗಿಲ್ಲ. ಹೀಗಾಗಿ ಜಗತ್ತಿನ ಅತಿ ಭಾರದ ಬೆಕ್ಕು ಎಂಬ ಖ್ಯಾತಿ ಸ್ಪಾಂಜ್ ಬಾಬ್‌ಗೆ ಒಲಿದಿದೆ.

ಮಿಯೋ ಬೆಕ್ಕು ಭಾರಿ ತೂಕದ ಜೊತೆಗೆ ಅನೇಕ ರೋಗಗಳಿಗೆ ತುತ್ತಾಗಿತ್ತು. ಆದರೆ ಬಾಬ್ ಹಾಗಲ್ಲ. ಆರೋಗ್ಯಕರವಾದ ಈ ಬೆಕ್ಕಿಗೆ ನಿತ್ಯವೂ ವ್ಯಾಯಾಮ ಮಾಡಿಸಲಾಗುತ್ತದೆ. ಸಾಮಾನ್ಯವಾಗಿ ಭಾರಿ ಗಾತ್ರದ ಬೆಕ್ಕುಗಳಿಗಿರುವ ಹೈಪರ್ ಥೈರಾಯ್ಡ್ ಸಮಸ್ಯೆಯೂ ಈ ಬೆಕ್ಕಿಗಿಲ್ಲ.

ಇದನ್ನು ಬಹಳ ಮುತುವರ್ಜಿಯಿಂದ ಈ ಸಂಸ್ಥೆಯಲ್ಲಿ ನೋಡಿಕೊಳ್ಳುತ್ತಾರೆ. ಇದರ ತಿನ್ನುವ ಚಟಕ್ಕೆ ಕಡಿವಾಣ ಹಾಕಲಾಗಿದೆ. ಹೀಗಾಗಿ ಈ ಬೆಕ್ಕು ಚಟುವಟಿಕೆಯಿಂದ ಓಡಾಡಿಕೊಂಡಿದೆ ಎಂದು ವಿವರಿಸುತ್ತಾರೆ ಇದನ್ನು ನೋಡಿಕೊಳ್ಳುತ್ತಿರುವ ಎನಿಮಲ್ಸ್ ಹೆವನ್ ಸಂಸ್ಥೆಯ ಸಹ ನಿರ್ದೇಶಕಿ ಕೆಂಡ್ರಾ ಮಾರಾ.

ಅಂದ ಹಾಗೆ, ಈ ಬೆಕ್ಕು ಇತ್ತೀಚೆಗೆ ಆರೋಗ್ಯದ ದೃಷ್ಟಿಯಿಂದ ತೂಕವನ್ನು ಕಡಿಮೆ ಮಾಡಿಕೊಂಡು ಸ್ಲಿಮ್ ಆಗುತ್ತಿದೆಯಂತೆ.

■ ಸುಭಾಸ ಯಾದವಾಡ